**<u>ಅಸಲು ದಾವಾ ಸಂಖ್ಯೆ:- 147/2018</u>** ಪಿ.ಡಬ್ಲ್ಯೂ:- **1**

ದಿನಾಂಕಃ **24-10-2024** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-</u>

ವೀರಾಚಾರಿ ಮತ್ತು ಶಾಮಾಚಾರಿ ನನಗೆ ಚಿಕ್ಕಪ್ಪರಾಗಬೇಕು. ಶಾಮಾಚಾರಿ ಮಗ ಶಿವರಾಜಚಾರಿ ನನಗೆ ತಮ್ಮನಾಗಬೇಕು. ಶಿವರಾಜಚಾರಿರವರು ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪರವರ ಮೇಲೆ ಭಾಗಾಂಶ ಕೋರಿ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಈ ದಾವೆಯ ಪ್ರತಿವಾದಿಯನ್ನು 13 ನೇ ಪ್ರತಿವಾದಿಯಾಗಿ ಮಾಡಿದ್ದು ಮತ್ತು ಸದರಿ ದಾವೆಯು ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ವಾದ ಪತ್ರದಲ್ಲಿ ನಮೂದಾಗಿರುವ ಅಸಲು ದಾವಾ ಸಂಖ್ಯೆ 138/2009 ರ ದಾವೆಯನ್ನು ಯಾರು ಯಾರ ಮೇಲೆ ಸಲ್ಲಿಸಿದ್ದಾರೆ ಎಂಬ ವಿಚಾರ ನನಗೆ ಗೊತ್ತಿಲ್ಲ. ಅಸಲು ದಾವಾ ಸಂಖ್ಯೆ 138/2009 ರಲ್ಲಿ ಏನು ಆದೇಶ ಆಗಿದೆ ಎಂಬ ವಿಚಾರ ನನಗೆ ಗೊತ್ತಿಲ್ಲ. ನನ್ನ ವಾದ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತಿಲ್ಲ. ಈ ದಾವೆಯನ್ನು ಸಲ್ಲಿಸಲು ವ್ಯಾಜ್ಯಾ ಕಾರಣವು ಯಾವಾಗ ಉದ್ಭವಿಸಿತು ಎಂಬ ಬಗ್ಗೆ ನನಗೆ ನೆನಪಿಲ್ಲ. ನನಗೆ ಈ ದಾವೆಯನ್ನು ಸಲ್ಲಿಸಲು 2008 ನೇ ಸಾಲಿನಲ್ಲಿ ತಿಳಿದಿರುತ್ತದೆ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಕ್ರಯ ಪತ್ರವನ್ನು ಪ್ರತಿವಾದಿಗೆ ಯಾರು ಯಾರು ಬರೆದುಕೊಟ್ಟಿದ್ದಾರೆ ಮತ್ತು ಯಾವ ದಿನಾಂಕ ಬರೆದುಕೊಟ್ಟಿದ್ದಾರೆ ಎಂಬ ವಿಚಾರ ನನಗೆ ಗೊತ್ತಿಲ್ಲ. ದಾವಾ ಆಸ್ತಿ ನನಗೆ ಸೇರಿದ್ದು ಎಂದು ದಾವೆಯನ್ನು ಸಲ್ಲಿಸಿದ್ದೆನು. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ನಮ್ಮ ವಕೀಲರಿಗೆ ಇ.ಸಿ, ಮುಟೇಷನ್ ಮತ್ತು ಪಹಣಿ ಪತ್ರಿಕೆಗಳನ್ನು ಕೊಟ್ಟಿದ್ದೆನು. ನಮ್ಮ ತಂದೆಯವರಿಗೆ ಓದು ಬರಹ ಬರುತ್ತಿರಲಿಲ್ಲ ಮತ್ತು ನಮ್ಮ ತಂದೆಯವರು ತಮ್ಮ ಸಹಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಮಾಡುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.